ಚಾಕೊಲೇಟನ್ನು ತರಿಸಿಟ್ಟುಕೊಂಡಿದ್ದ. ಅವನು ನೀಲ್‌ಗೆ ಚಾಕೊಲೇಟನ್ನು ಕೊಟ್ಟ. ನೀಲ್ ಧನ್ಯವಾದಗಳನ್ನು ಹೇಳಿದ.

ಅಪ್ಪನ ಮನೆ ಮಾರಾಟವಾಗಿತ್ತು. ಆದರೆ ನಾನು ನಮ್ಮ ಪಕ್ಕದ ಮನೆಯ ರೂಬಿ ಆಂಟಿಯನ್ನು ಭೇಟಿಯಾಗಲು ಹೋದೆ. ಕುಂಜಮ್ಮಾ ಸಹ ನನ್ನ ಜೊತೆಗೆ ಬಂದರು.

'ಕುಂಜಮ್ಮಾ, ಮನೆಯನ್ನು ಯಾರು ಖರೀದಿಸಿದರು?' ನಾನು ಕೇಳಿದೆ.

'ನೋಡಲು ಬಯಸುತ್ತೀಯ?'

'ಇಲ್ಲ, ಹೋಗಲಿ ಬಿಡಿ ಕುಂಜಮ್ಮಾ.'

'ನಡಿ ನಡಿ... ತುಂಬಾ ಒಳ್ಳೆಯ ಜನ... ಹಿಂದೂಗಳು...'

ನೀಲ್ ಮತ್ತು ಮಾರ್ಕೋಗೆ ನನ್ನ ಪೂರ್ವಿಕರ ಮನೆಯನ್ನು ತೋರಿಸಲು ಬಯಸುತ್ತಿದ್ದೆ. ಈ ಮನೆಯಲ್ಲಿ ನಾನು ಬೆಳೆದಿದ್ದೆ.

ಕುಂಜಮ್ಮಾ ನಮ್ಮನ್ನು ಅವರ ಮನೆಗೆ ಕರೆದೊಯ್ದರು. ಮನೆ ಸಂಪೂರ್ಣವಾಗಿ ಬದಲಾಗಿತ್ತು, ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಕುಂಜಮ್ಮಾ ಅಲ್ಲಿ ವಾಸ ಮಾಡುವವರಿಗೆ, ಈ ಮನೆ ಒಂದು ಕಾಲದಲ್ಲಿ ಇವರದಾಗಿತ್ತು ಎಂದರು. ಅವರು ನಮ್ಮನ್ನು ಸ್ವಾಗತಿಸಿ, ಇಡೀ ಮನೆಯನ್ನು ತೋರಿಸಿದರು. ಹೊಸ ಖರೀದಿದಾರರು ಮನೆಯನ್ನು ರಿನೊವೇಟ್ ಮಾಡಿ ಸುಂದರಗೊಳಿಸಿದ್ದರು. ಆದರೆ ಮರಗಿಡಗಳ ಬೇಲಿಯಲ್ಲಿ ಅಲೊವೆರಾದ ಪೊದೆಗಳು ಈಗಲೂ ಇದ್ದವು. ನಾನು ಅಲೊವೆರಾದ ಪೊದೆಗಳನ್ನು ನೇವರಿಸಿದೆ, ಇದನ್ನು ನೋಡಿ ಕುಂಜಮ್ಮಾ ಮಾರ್ಕೋಗೆ ಹೇಳಿದರು, 'ಇವಳಿಗೆ ಬಾಲ್ಯದಿಂದಲೂ ಮರಗಿಡಗಳೆಂದರೆ ಪ್ರಾಣ.'

ರೂಬಿ ಆಂಟಿ ನನ್ನನ್ನು ನಿರೀಕ್ಷಿಸುತ್ತಿದ್ದರು. ಅವರನ್ನು ಭೇಟಿಯಾದೆ, ಸಕೀನಾಳ ಕ್ಷೇಮಸಮಾಚಾರವನ್ನು ಕೇಳಿದೆ. ರೂಬಿ ಆಂಟಿ ಪ್ರತಿ ಬಾರಿಯಂತೆ ನನಗೆ ಸ್ಕಾರ್ಫ್, ಜುವೆಲರಿಯನ್ನು ಉಡುಗೊರೆ ಕೊಟ್ಟರು. ಒಂದು ಕಾಲದಲ್ಲಿ ಅವರು ಇವುಗಳ ವ್ಯಾಪಾರ ಮಾಡುತ್ತಿದ್ದರು. ಈಗ ಗಿಫ್ಟ್ ಅಷ್ಟೇ ಕೊಡುತ್ತಾರೆ.

ನಾವು ಕುಂಜಮ್ಮಾರಿಂದ ಬೀಳ್ಕೊಂಡು ಹೋಟೆಲ್‌ಗೆ ಮರಳಿ ಬಂದೆವು. ಮಾರನೆಯ ದಿನ ಚೆರಿಯಾಮ್ಮಾರ ಮನೆಗೆ ಹೋದೆವು. ಅಲ್ಲಿಗೆ ಕುಂಜಮ್ಮಾ ಮತ್ತು ರೂಬಿ ಆಂಟಿ ಸಹ ಬಂದಿದ್ದರು. ಅವರು ನನ್ನ ಹುಟ್ಟು ಮತ್ತು ಬಾಲ್ಯವನ್ನು ಕಣ್ಣಾರೆ ನೋಡಿದ್ದರು... ನಾನು ಪದೇಪದೇ ಅವರನ್ನು ತಬ್ಬಿಕೊಂಡು, ಅವರ ಶರೀರದ ಕಾವನ್ನು ಅನುಭವಿಸುತ್ತಿದ್ದೆ. ಅವರು ಸ್ನೇಹದಿಂದ ನನ್ನ ಗಲ್ಲ ಮತ್ತು ತಲೆಯನ್ನು ನೇವರಿಸುತ್ತಿದ್ದರು. ಚೆರಿಯಾಮ್ಮಾ ನಮಗೆ ಕೇರಳದ ಪಾರಂಪರಿಕ ಆಹಾರಗಳಾದ ಅಪ್ಪಮ್, ಪುತ್ತು, ಕದಾಲಾ ಕರಿ, ಪಾಥಿರಿ, ಚಿಕನ್ ಸ್ಟೂ ಮತ್ತು ಅವಿಯಲ್‌ಗಳ ರುಚಿಯನ್ನು ಸವಿಸಿದರು. ಆತ್ಮಕ್ಕೆ ತೃಪ್ತಿಯಾಯಿತು.

ನಾನು ಕುಂಜಮ್ಮಾ ಮತ್ತು ಚೆರಿಯಾಮ್ಮಾರಿಗೆ, ನೀವು ನನ್ನ ಬಳಿ ಯೂರೋಪಿಗೆ ಎಂದೂ ಬರಲಿಲ್ಲ, ಆದರೆ ಈಗ ಬೆಂಗಳೂರಿಗೆ ಖಂಡಿತ ಬನ್ನಿ ಎಂದೆ. ಚೆರಿಯಾಮ್ಮಾರ ಮಗಳು ವಿಲ್ಲಿ ಸಹ ಬೆಂಗಳೂರಿನಲ್ಲಿದ್ದಳು. ಚೆರಿಯಾಮ್ಮಾ ನನಗೆ, ನಾನು ಖಂಡಿತ ಬೆಂಗಳೂರಿಗೆ ಬರುತ್ತೇನೆ, ಕುಂಜಮ್ಮಾರನ್ನೂ ಕರೆತರುತ್ತೇನೆ ಎಂದರು.

***

ನನ್ನ ಎಲ್ಲಾ ಕಸಿನ್ಸ್ ದೂರದಲ್ಲಿದ್ದುದರಿಂದ ಭೇಟಿಯಾಗಲು ಸಾಧ್ಯವಾಗಿರಲಿಲ್ಲ, ಈಗ ಮತ್ತೆ ಸಂಪರ್ಕವೇರ್ಪಟ್ಟಿತು, ಆತ್ಮೀಯತೆ ಹೆಚ್ಚಿತು. ಸಂಬಂಧಗಳು ಪುನಃ ಜೀವಂತಗೊಂಡವು. ನನ್ನ ದೇಶ ಭಾರತವನ್ನು ಮತ್ತೊಮ್ಮೆ ಅರ್ಥ ಮಾಡಿಕೊಂಡೆ. ಒಟ್ಟಿನಲ್ಲಿ ಇಲ್ಲಿಯ ಜೀವನ ಹೆಚ್ಚು ವೈವಿಧ್ಯಮಯ ಮತ್ತು ಕುತೂಹಲಕಾರಿಯಾಗಿದೆ ಎಂದು ಅನ್ನಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಸೀರೆಯನ್ನೂ ಉಡುತ್ತಿದ್ದೆ. ಸೀರೆಯನ್ನು ಉಡದೆ ಎಷ್ಟೋ ವರ್ಷಗಳಾಗಿತ್ತು. ಕುಂಜಮ್ಮಾ ಮತ್ತು ಚೆರಿಯಾಮ್ಮಾ ಬೆಂಗಳೂರಿನ ನಮ್ಮ ಮನೆಗೆ ಬಂದರು. ಅಲ್ಲದೆ ರೂಬಿ ಆಂಟಿ ಸಹ ಬಂದರು. ಅವರನ್ನು ಭೇಟಿಯಾದಾಗ ವಿಶೇಷ ಭಾವನೆ ಮತ್ತು ಶಕ್ತಿ ಬಂದಂತಾಗುತ್ತದೆ. ನನ್ನ ಹಿಂದಿನ ವಯಸ್ಸಿಗೆ ಮತ್ತೆ ಓಡಿ ಬಂದಿದ್ದೇನೆ ಎಂದು ಅನ್ನಿಸುತ್ತದೆ, ನನ್ನನ್ನು ಮಗುವೆಂದು ತಿಳಿಯುತ್ತೇನೆ. ನಾನು ಈ ಹಿಂದೆಯೇ, 'ನೀವೆಲ್ಲಿಯಾದರೂ ಇರಿ, ನಿಮ್ಮ ಜೀವನ ಎಷ್ಟು ಸಾರ್ಥಕವೆಂಬುದು ಅಲ್ಲಿಯ ಪರಿಸರಕ್ಕಿಂತ, ನೀವು ನಿಮ್ಮ ದಿನಚರಿಯನ್ನು ಹೇಗೆ ರೂಪಿಸಿಕೊಳ್ಳುತ್ತೀರ ಎಂಬುದನ್ನು ಅವಲಂಬಿಸಿರುತ್ತದೆ' ಎಂದು ಹೇಳಿದ್ದೇನೆ. ಮುಂದೇನು ಮಾಡುವುದು? ಎಲ್ಲಾ ಸಂಬಂಧಿಕರನ್ನು ಭೇಟಿಯಾದ ನಂತರ, ಈಗೇನು ಮಾಡಲಿ ಎಂದು ಯೋಚಿಸಿದೆ. ದಿನಚರಿ ವ್ಯವಸ್ಥಿತವಾದಾಗ ಜೀವನ ಹೆಚ್ಚು ಫಲದಾಯಕವಾಗುತ್ತದೆ.

ನಾನು ಕಂಪ್ಯೂಟರ್ ಶಿಕ್ಷಕಿಯಾಗಿದ್ದೆ. ಭಾರತದಲ್ಲಿರುವಾಗ ಕೆಲವು ಕಂಪ್ಯೂಟರ್ ಕೋರ್ಸ್‌ಗಳನ್ನು ಮಾಡಿ ನನ್ನ ಕಂಪ್ಯೂಟರ್ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಬಯಸುತ್ತಿದ್ದೆ. ಅದಕ್ಕಾಗಿ ಸ್ವಲ್ಪ ಹಣ ಬೇಕಿತ್ತು. ಆದರೆ ಮಾರ್ಕೋ ಹಣ ಕೊಡಲು ನಿರಾಕರಿಸಿದ. ನಾನು ಎಂಬಿಎ ಮಾಡಬೇಕೆಂದಿದ್ದೇನೆ, ಅದಕ್ಕಾಗಿ ಹಣವನ್ನು ಉಳಿಸಬೇಕಿದೆ ಎಂದ. ನಿಮ್ಮ ತಂದೆ–ತಾಯಿ ಶ್ರೀಮಂತರು, ದ್ರಾಕ್ಷಿಯ ವ್ಯಾಪಾರವನ್ನು ಮಾಡುತ್ತಾರೆ, ನೀವೇಕೆ ಅವರಿಂದ ಆರ್ಥಿಕ ಸಹಾಯ ಪಡೆಯಬಾರದು ಎಂದು ಮಾರ್ಕೋಗೆ ಹೇಳಿದೆ. ಅವನು, ನಾನು ನನ್ನ ತಂದೆಯಿಂದ ಒಂದು ನಯಾಪೈಸೆಯನ್ನೂ ಯಾಚಿಸುವುದಿಲ್ಲ ಎಂದ. ಹಾಗಂತ ಕಳೆದ ಎರಡು ವರ್ಷಗಳಿಂದ ಅವರ ತಂದೆಯ ಬಿಜಿನೆಸ್ ಚೆನ್ನಾಗಿ ನಡೆಯುತ್ತಿರಲಿಲ್ಲ.

ಮಾರ್ಕೋನೊಂದಿಗಿನ ಸಂಘರ್ಷಕ್ಕೆ ಹಣವೇ ಮುಖ್ಯ ಕಾರಣವಾಗಿತ್ತು. ಅವನು ಶ್ರೀಮಂತ ಪರಿವಾರದವನಾಗಿದ್ದರೂ, ಹಣದ ಬಗ್ಗೆ ಉದಾರಿಯಾಗಿರಲಿಲ್ಲ, ಅವನಿಗೆ ಉಳಿತಾಯದಲ್ಲಿ ಆಸಕ್ತಿಯಿತ್ತು. ಉಳಿತಾಯ, ಉಳಿತಾಯ, ಉಳಿತಾಯ... ನಾನು ಅವನೊಂದಿಗೆ, 'ಉಳಿತಾಯ ವನ್ನೇ ಮಾಡುತ್ತಿರಿ, ಖರ್ಚು ಮಾಡಬೇಡ ಅಂದರೆ?' ಎಂದು ಪಾಟಿ ಸವಾಲು ಹಾಕುತ್ತಿದ್ದೆ. ನಾನು ಮಧ್ಯಮ ವರ್ಗದ ಪರಿವಾರದಲ್ಲಿ ಬೆಳೆದಿದ್ದಾಗ್ಯೂ, ಹಣದ ಬಗ್ಗೆ ಯೋಚಿಸುತ್ತಿರಲಿಲ್ಲ, ಹಣವನ್ನು ಹೆಚ್ಚು ವ್ಯಯಿಸುತ್ತಿದ್ದೆ.

ಸುಮಾರು ಇಪ್ಪತ್ತು ವರ್ಷಗಳ ನಂತರ ನಾನು ಭಾರತದಲ್ಲಿ ಒಂದು ದೀರ್ಘ ಅವಧಿಗೆ ಇರಲು ಬಂದಿದ್ದೆ. ಈ ಸಮಯದ ಲಾಭವನ್ನೇಕೆ ಪಡೆಯಬಾರದು? ಸಂಬಂಧಿಕರು ಮತ್ತು ಮಿತ್ರರನ್ನು ಭೇಟಿಯಾಗುವುದು ಮಾತ್ರವಲ್ಲ, ಮತ್ತೇನಾದರೂ ಮಾಡಬೇಕೆಂದು ಮನಸ್ಸು ಹಾತೊರೆಯುತ್ತಿತ್ತು. ಇದು ನನ್ನ ದೇಶ, ಇಲ್ಲಿ ಕೋರ್ಸ್, ಟ್ರೈನಿಂಗ್ ಮುಂತಾದವುಗಳು ಪಾಶ್ಚಾತ್ಯ ದೇಶಗಳಷ್ಟು ದುಬಾರಿಯಲ್ಲ. ನಾನು ಹೆಚ್ಚು ಹಣದ ಅವಶ್ಯಕತೆಯಿಲ್ಲದ ಕೋರ್ಸ್‌ಗಳಿಗಾಗಿ ಹುಡುಕಾಟ ನಡೆಸಿದೆ; ಸಮಯಾವಕಾಶವನ್ನು ವಶಪಡಿಸಿಕೊಳ್ಳಲು ಬಯಸುತ್ತಿದ್ದೆ.

ಅಪ್ಪನ ಮನೆಯ ಮಾರಾಟದಿಂದ ನನ್ನ ಪಾಲಿಗೆ ಸಿಕ್ಕ ಹಣವನ್ನು ತುಂಬಾ ಮಿತವ್ಯಯದಿಂದ ಖರ್ಚು ಮಾಡುತ್ತಿದ್ದೆ. ಕಷ್ಟದ ದಿನಗಳಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ಯೋಚಿಸುತ್ತಿದ್ದೆ. ಈಗ ಆ ಹಣದಿಂದ ಯಾವುದಾದರೂ ಕೋರ್ಸ್ ಮಾಡಲು ಯೋಚಿಸಿದೆ.

ಆಯುರ್ವೇದದ ಮಸಾಜಿನ ಬಗ್ಗೆ ನನ್ನ ಆಸಕ್ತಿ ಮತ್ತು ಉತ್ಸಾಹ ಈ ಹಿಂದಿನಿಂದಲೂ ಇತ್ತು. ಕೀನ್ಯಾದ ಮೌರೀನ್ ಟಾಡ್‌ರಿಂದ ನಾನು ಆಯಿಲ್ ಮಸಾಜಿನ ಕೆಲವು ಗುಣಗಳನ್ನು ಕಲಿತಿದ್ದೆ. ಅಮೆರಿಕದಲ್ಲಿರುವಾಗ ಇಂಟರ್ನೆಟ್‌ನಲ್ಲಿ ಈ ಬಗ್ಗೆ ಸಾಕಷ್ಟು ಹುಡುಕಿದ್ದೆ, ಆದರೆ ಯಾವುದೇ ಪ್ರೊಫೆಷನಲ್ ಕೋರ್ಸ್ ಮಾಡದಾಗಿದ್ದೆ. ನಾನು ಬಾಲ್ಯದಿಂದಲೇ ಕೇರಳದ ಶಿರೋಧಾರ್, ಅಭ್ಯಂಗಾ, ಕುರಾಲಿ ಮತ್ತು ಕೈರಾಲಿ ಮಸಾಜಿನ ಬಗ್ಗೆ ಕೇಳುತ್ತಾ ಬಂದಿದ್ದೆ.

## ಕೈರಾಲಿ ಮಸಾಜ್ ಪಾರ್ಲರ್!

ಸಾಕಷ್ಟು ಹುಡುಕಾಡಿದ ನಂತರ ಅದೃಷ್ಟವೆಂಬಂತೆ ಬೆಂಗಳೂರಿನಲ್ಲಿ ರಾಷ್ಟ್ರೀಯ ಮಾನ್ಯತೆಯನ್ನು ಪಡೆದ ಅಭ್ಯಂಗಾ 'ಕೇರಳ ಆಯುರ್ವೇದಿಕ್ ಮಸಾಜ್ ಥೆರಪಿ ಕೇಂದ್ರ' ಸಿಕ್ಕಿತು. ಮೂರು ವಾರಗಳ ಮಸಾಜ್, ಬಾಡಿ ಥೆರಪಿ ಕೋರ್ಸ್‌ಗೆ ಸಂಬಂಧಿಸಿತ್ತು. ಮಸಾಜ್ ಸೆಂಟರಿನ ಪ್ರಶಿಕ್ಷಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳೊಂದಿಗೆ ನನ್ನ ಪರಿಚಯವಾಯಿತು. ವೇಣುಗೋಪಾಲ್ ನಂಬಿಯಾರ್ ನನ್ನ ಪ್ರಧಾನ ಗುರುಗಳಾಗಿದ್ದರು. ಅವರಿಗೆ ನಾಲ್ವರು ಶಿಷ್ಯರಿದ್ದರು. ನನ್ನನ್ನು ಹೊರತುಪಡಿಸಿ ಇನ್ನೂ ಹತ್ತು ವಿದ್ಯಾರ್ಥಿಗಳು ಅಲ್ಲಿ ಮಸಾಜ್ ಥೆರಪಿಯನ್ನು ಕಲಿಯುತ್ತಿದ್ದರು.

ಥಿಯರಿ ಮತ್ತು ಪ್ರಾಕ್ಟಿಕಲ್ ಎರಡೂ ತರಗತಿಗಳು ನಡೆಯುತ್ತಿದ್ದವು. ಥಿಯರಿಯಲ್ಲಿ ಮುಖ್ಯವಾಗಿ ಆರೋಗ್ಯ ರಕ್ಷಣೆಯಲ್ಲಿ ಮಸಾಜು, ಚರ್ಮರೋಗ ಮತ್ತು ಚಿಕಿತ್ಸೆ, ಬಿಜಿನೆಸ್ ಸ್ಟಡೀಸ್, ಸೆಲೂನ್ ಪ್ರಕ್ರಿಯೆಗಳು ಹೀಗೆ ನಾಲ್ಕು ವಿಷಯಗಳ ಮೇಲೆ ಬೋಧಿಸಲಾಗುತ್ತಿತ್ತು.

(ಸಶೇಷ)